

# ರಕ್ತ ಮರ!



ದಕ್ಷಿಣ ಆಫ್ರಿಕಾ ಮೂಲದ ಟೆರೋ ಕಾರ್ಪಸ್ ಅಂಗೋಲೆನ್ಸಿಸ್ ಎಂಬ ವೈಜ್ಞಾನಿಕ ಹೆಸರುಳ್ಳ ಸಾಗುವಾನಿ ಮರವಿದೆ. ಈ ಮರಕ್ಕೆ ಕಿಯಾಟ, ಮುಕ್ವಾ, ಮುನಿಂಗಾ ಎಂಬೆಲ್ಲಾ ಹೆಸರುಗಳಿವೆ. ಇದರಲ್ಲಿ ಗಾಢ ರಕ್ತವರ್ಣದ ರಸವಿರುವುದರಿಂದ ಬ್ಲಡ್ ವುಡ್ ಟ್ರೀ ಎಂದೂ ಸಹ ಕರೆಯುತ್ತಾರೆ.

ಅಕಸ್ಮಾತ್ ನೀವೇನಾದರೂ ಈ ಮರವನ್ನು ಕಡಿದರೆ, ಪ್ರಾಣಿಗಳ ಅಂಗಾಂಗ ಕತ್ತರಿಸಿದಾಗ ಹೇಗೆ ರಕ್ತ ಬರುವುದೋ ಥೇಟ್ ಹಾಗೆಯೇ ಇದರಿಂದ ಕೆಂಬಣ್ಣದ ರಸ ಒಸರುತ್ತದೆ. ಅಂಟು ಅಂಟಾದ ಈ ದ್ರವವು ಮರಕ್ಕಾಗಿರುವ ಗಾಯ ಒಣಗಲು ಸಹಾಯ ಮಾಡುತ್ತದೆ.

ಬ್ಲಡ್ ವುಡ್ ಮರ ಗಾಢ ಕಂದು ಬಣ್ಣದ ಒರಟಾದ ತೊಗಟೆಯನ್ನು ಹೊಂದಿದ್ದು 12 ರಿಂದ 18 ಮೀಟರ್‌ಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ ಹಾಗೂ ಹಳದಿ ಹೂಗಳನ್ನು ಬಿಡುತ್ತದೆ. ಮರ ಸ್ರವಿಸುವ ಕೆಂಬಣ್ಣದ ರಸವನ್ನು ಸಾಂಪ್ರದಾಯಿಕ ಬಣ್ಣವಾಗಿ ಬಳಕೆ ಮಾಡುತ್ತಾರೆ. ಇನ್ನೂ ಕೆಲವು ಪ್ರದೇಶಗಳಲ್ಲಿ ಪ್ರಾಣಿಗಳ ಕೊಬ್ಬಿನೊಂದಿಗೆ ಇದನ್ನು ಬೆರೆಸಿ ಮುಖ ಹಾಗೂ ಮೈಗೆಲ್ಲಾ ಹಚ್ಚಿಕೊಳ್ಳುವ ಅಲಂಕರಣ ಸಾಧನ (ಕಾಸ್ಮೆಟಿಕ್ಸ್)ವನ್ನು ತಯಾರಿಸುತ್ತಾರೆ. ಹಲವು ಕಾಯಿಲೆಗಳನ್ನು ದೂರ ಮಾಡುವ ಶಕ್ತಿ ಈ ಮರಕ್ಕೆ ಇದೆಯೆಂದು ನಂಬಲಾಗಿದೆ. ಅಂತೆಯೇ ಮಲೇರಿಯಾ, ಹುಳುಕಡ್ಡಿ, ಹೊಟ್ಟೆ ನೋವಿನ ಸಮಸ್ಯೆ, ಎದೆಹಾಲು ಹೆಚ್ಚಳಕ್ಕೆ, ಕಣ್ಣಿನ ತೊಂದರೆ ಮುಂತಾದವುಗಳಿಗೆ ಈ ಮರವನ್ನು ಔಷಧಿಯಾಗಿ ಬಳಸುತ್ತಾರೆ.

ಬ್ಲಡ್ ವುಡ್ ಮರದಿಂದ ಉತ್ತಮ ಗುಣಮಟ್ಟದ ಪೀಠೋಪಕರಣಗಳನ್ನು ತಯಾರಿಸಬಹುದು. ಈ ಮರವನ್ನು ಕೆತ್ತುವುದು ಬಲು ಸುಲಭ. ಹಾಗೆಯೇ ಅಂಟಿಸುವುದು, ತಿರುಪು ಮೊಳೆ ಹಾಕುವುದು ಮತ್ತು ಪಾಲಿಷ್ ಮಾಡುವುದು ಸಹ ತುಂಬಾ ಸಲೀಸು. ಹಸಿರುಳ್ಳ ಹಸಿ ಮರ ಒಣಗುವಾಗ ಸ್ವಲ್ಪ ಮಟ್ಟಿಗೆ ಮಾತ್ರ ಶ್ರಿಂಕ್ ಆಗುತ್ತದೆ. ಈ ಗುಣವಿರುವುದರಿಂದಲೇ ಈ ಮರವನ್ನು ದೋಣಿ ತಯಾರಿಸಲು, ಸ್ನಾನ ಗೃಹಗಳ ನೆಲ ಬಾಗಿಲನ್ನು ತಯಾರಿಸಲು ಬಳಸುತ್ತಾರೆ.

**ವಿನಯ್ ಕುಮಾರ್ ಬಿ.ಎಚ್.**